**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1052 |
| 2 | ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 12-03-2026 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ 2023ನೇ ಸಾಲಿನಿಂದ ಇಲ್ಲಿಯವರೆಗೆ ಕಟ್ಟಡಗಳಿಗೆ ಉಪಸಂಖ್ಯೆ (Sub-Number) ಮತ್ತು ಸಿಸಿ ಮತ್ತು ಓಸಿ ನೀಡುವಂತೆ ಬಂದ ಒಟ್ಟು ಅರ್ಜಿಗಳೆಷ್ಟು; ವಿಲೇವಾರಿ ಮಾಡಿದ ಅರ್ಜಿಗಳೆಷ್ಟು ಹಾಗೂ ಅವುಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು ಹಾಗೂ ವಿಲೇವಾರಿಗೆ ಬಾಕಿ ಇರುವ ಅರ್ಜಿಗಳೆಷ್ಟು; | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ 2023ನೇ ಸಾಲಿನಿಂದ ದಿನಾಂಕ:26-02-2026 ರವರೆಗೆ ಉಪಸಂಖ್ಯೆ (Sub-Number) ಸಂಬಂಧಿತ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br>ಈ ಹಿಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ (ಉತ್ತರ ಮತ್ತು ದಕ್ಷಿಣ) ಕಚೇರಿಯಿಂದ ಹಾಗೂ ದಿನಾಂಕ: 02.09.2025 ರಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬರುವವರೆಗೆ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br>ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಐದು ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬಂದ ನಂತರ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |
| ಆ) | ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಕಟ್ಟಡಗಳಿಗೆ ಉಪಸಂಖ್ಯೆ, ಸಿಸಿ ಮತ್ತು ಓಸಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಟ್ಟಡಗಳಿಗೆ ಉಪಸಂಖ್ಯೆ ನೀಡದಂತೆ ಹೊರಡಿಸಿದ ಆದೇಶ/ಸುತ್ತೋಲೆ ಮಾರ್ಗಸೂಚಿಗಳ ಪ್ರತಿಗಳನ್ನು ನೀಡುವುದು; | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಕಟ್ಟಡಗಳಿಗೆ ಕೆಟಿಸಿಪಿ ಕಾಯ್ದೆ 1961ರ ಪ್ರಕರಣ 15, ವಲಯ ನಿಮಾವಳಿಗಳು, ಬಿಲ್ಡಿಂಗ್ ಬೈಲಾ, ಜಿಬಿಎ ಕಾಯ್ದೆ 2024 ಪ್ರಕರಣ 230ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ನಕ್ಷೆ ಮಂಜೂರಾತಿ ಪಡೆದು, ಜಿಬಿಎ ಕಾಯ್ದೆ 2024ರ ಪ್ರಕರಣ 241ರ ಅಡಿಯಲ್ಲಿ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯಬೇಕಾಗಿರುತ್ತದೆ. ಸದರಿ ಎಲ್ಲಾ ಕ್ರಮವನ್ನು ಅನುಸರಿಸಿದ ಪ್ರಕರಣಗಳಲ್ಲಿ ಸ್ವಾಧೀನಾನುಭವ ಪ್ರಮಾಣ ಪತ್ರದ ಆಧಾರ ಪ್ಲಾಟ್ / ಘಟಕಗಳಿಗೆ ಉಪ ಸಂಖ್ಯೆಗಳನ್ನು ನೀಡಿ ಎ ಖಾತೆಯನ್ನು ನೀಡಲಾಗುತ್ತದೆ.<br>'ಎ' ಖಾತಾ ಅಥವಾ 'ಬಿ' ಖಾತಾದಲ್ಲಿರುವ ಸ್ವತ್ತುಗಳಲ್ಲಿ ನಕ್ಷೆ ಮಂಜೂರಾತಿಯನ್ನು ಪಡೆದು ಅಥವಾ ಪಡೆಯದೇ, ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯದೇ ಕಟ್ಟಡಗಳನ್ನು ನಿರ್ಮಿಸಿರುವ ಪ್ರಕರಣಗಳಲ್ಲಿ ದಿನಾಂಕ: 30-09-2024 ಕ್ಕಿಂತ ಮೊದಲು ಉಪ |
| ಇ) | ಹಿಂದಿನ ವರ್ಷಗಳಲ್ಲಿ 2023 ಮತ್ತು 2025ನೇ ಸಾಲಿನಲ್ಲಿ ನಿರ್ಮಿತವಾದ ಕಟ್ಟಡಗಳಿಗೆ ಉಪಸಂಖ್ಯೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; | |

...2.

| | | |
|---|---|---|
| ಈ) | ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಜಾರಿಗೆ ತರಲಾಗುವುದು; ಇಲ್ಲದಿದ್ದಲ್ಲಿ, ಅಂತಹ ಕಟ್ಟಡಗಳ ಮೇಲೆ ಸರ್ಕಾರ ಕೈಗೊಳ್ಳುವ ಮುಂದಿನ ಕ್ರಮಗಳೇನು ಎನ್ನುವುದರ ಸಂಪೂರ್ಣ ಮಾಹಿತಿ ನೀಡುವುದು? | ನೊಂದಣಿ ಕಛೇರಿಗಳಲ್ಲಿ ನೊಂದಣಿ ಆಗಿದ್ದಲ್ಲಿ ಹಾಗೂ BESCOM ನಿಂದ ವಿದ್ಯುತ್ ಸಂಪರ್ಕವನ್ನು ಅಥವಾ BWSSB ಯಿಂದ ನೀರಿನ ಸರಬರಾಜು ಸಂಪರ್ಕವನ್ನು ಪಡೆದಿದ್ದಲ್ಲಿ ಅಂತಹ ಏಕ - ಘಟಕ ಅಥವಾ ಬಹು ಘಟಕದ ಕಟ್ಟಡಗಳಿಗೆ ಉಪ ಸಂಖ್ಯೆಗಳನ್ನು ನೀಡಿ ಬಿ ಖಾತಾ ವಿತರಿಸಲು ಅವಕಾಶ ಕಲ್ಪಿಸಲಾಗಿದೆ. |

**ನಅಇ 107 ಎಂಎಸ್‌ಯು 2026**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

## ಅನುಬಂಧ-1

| ಸಾಲು | ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ | ವಿಲೇವಾರಿಯಾದ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಅರ್ಜಿಗಳ ಸಂಖ್ಯೆ | ಸಂಗ್ರಹಿಸಲಾಗಿರುವ ಆದಾಯ (ಮೊತ್ತ ರೂ.ಲಕ್ಷಗಳಲ್ಲಿ) |
|---|---|---|---|---|
| 2023 | 1144 | 1144 | 0 | 1662.43 |
| 2024 | 1114 | 1114 | 0 | 1570.91 |
| 2025 | 1314 | 840 | 474 | 3803.29 |

## ಅನುಬಂಧ-2

| ವಲಯ | ಪ್ರಾರಂಭಿಕ ಪ್ರಮಾಣ ಪತ್ರ | | | ಸ್ವಾಧೀನಾನುಭವ ಪ್ರಮಾಣ ಪತ್ರ | | |
|---|---|---|---|---|---|---|
| | 2023-24 | 2024-25 | 2025-26 | 2023-24 | 2024-25 | 2025-26 |
| ಉತ್ತರ | 26 | 84 | 27 | 47 | 78 | 28 |
| ದಕ್ಷಿಣ | 18 | 25 | 11 | 11 | 17 | 11 |
| ಒಟ್ಟು (ಓ.ಸಿ & ಸಿ.ಸಿ) | 44 | 109 | 30 | 58 | 95 | 39 |
| **ಒಟ್ಟು ಮೊತ್ತ** | **3,42,30,161** | **6,44,28,540** | **1,95,36,803** | **72,26,33,248** | **76,87,95,152** | **59,34,48,455** |

## ಅನುಬಂಧ-3

| ಪಾಲಿಕೆ | ಪ್ರಾರಂಭಿಕ ಪ್ರಮಾಣ ಪತ್ರ | | ಸ್ವಾಧೀನಾನುಭವ ಪ್ರಮಾಣ ಪತ್ರ | |
|---|---|---|---|---|
| | ಪ್ರಾರಂಭಿಕ ಪ್ರಮಾಣ ಪತ್ರ ನೀಡಿರುವ ಸಂಖ್ಯೆ | ಬಂದಿರುವ ಆದಾಯ ರೂ.ಗಳಲ್ಲಿ | ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಿರುವ ಸಂಖ್ಯೆ | ಬಂದಿರುವ ಆದಾಯ ರೂ.ಗಳಲ್ಲಿ |
| ಪೂರ್ವ | 12 | 9885175 | 26 | 1000387474 |
| ಪಶ್ಚಿಮ | 03 | 5936708 | 06 | 89380213 |
| ಉತ್ತರ | 06 | 61187798 | 12 | 5563757841 |
| ದಕ್ಷಿಣ | 04 | 1460548 | 19 | 215459048 |
| ಕೇಂದ್ರ | 02 | 2735010 | 04 | 110570933 |
| **ಒಟ್ಟು** | **30** | **16,46,48,744** | **68** | **699,23,21,832** |